ಬಿಡಿ ಬಿಡಿಯಾಗಿ ಕೆಲ ಶಾಸ್ತ್ರ ನಿಘಂಟು ಇವೆ. ಈ ಹಿನ್ನೆಲೆಯಲ್ಲಿ ಪ್ರಾತಿನಿಧಿಕವಾಗಿ ಕೆಲವು ಶಾಸ್ತ್ರಗಳ ನಿಘಂಟನ್ನು ಎ.ವಿ. ನಾವಡ ಅವರ ಸಂಪಾದಕತ್ವದಲ್ಲಿ ಮಾಡುತ್ತಿದ್ದೇವೆ.

'ಕನ್ನಡ ಸಾಹಿತ್ಯದಲ್ಲಿ ಜೀವನಮೌಲ್ಯ ಮಾಲೆ' ಮತ್ತೊಂದು ಯೋಜನೆ. ಈಗ ಮೌಲ್ಯಗಳು ಕುಸಿಯುತ್ತಿವೆ ಎಂದು ಹೇಳುತ್ತಿದ್ದೇವೆ. ಸಾಹಿತ್ಯವನ್ನು ಇಟ್ಟುಕೊಂಡು ಯಾವ ಕಾಲಘಟ್ಟದಲ್ಲಿ ಯಾವ ಜೀವನ ಮೌಲ್ಯ ಪ್ರತಿಪಾದನೆ ಆಗಿದೆ ಎನ್ನುವುದನ್ನು ಗುರುತಿಸಬೇಕಿದೆ. ಜನಪದ, ಶಾಸನ, ಚಂಪು, ರಗಳೆ, ಷಟ್ಪದಿ, ವಚನ, ನವೋದಯ, ನವ್ಯ – ಹೀಗೆ 18 ಪ್ರಕಾರಗಳಲ್ಲಿ ಮೌಲ್ಯವನ್ನು ಸಂಶೋಧಿಸಲು 18 ಲೇಖಕರು ಸಿದ್ಧರಾಗಿದ್ದಾರೆ. ಈ ಮಾಲಿಕೆಯನ್ನು ವಿ.ಎಸ್. ಮಾಳಿ ಸಂಪಾದಿಸುತ್ತಿದ್ದಾರೆ. 'ಕನ್ನಡ ಕವಿಗಳು ಕಂಡ ಗಾಂಧಿ' ಎಂಬ ಅಂಥಾಲಜಿಯನ್ನು ಚಂಪಾ ಅವರು ಮಾಡಿದ್ದರು. ಅದೇ ಮಾದರಿಯಲ್ಲಿ 'ಕನ್ನಡ ಕವಿಗಳ ಕಲ್ಪನೆಯಲ್ಲಿ ಭಾರತ' ಎನ್ನುವ ಅಂಥಾಲಜಿ ಮಾಡುತ್ತಿದ್ದೇವೆ ಮೃತ್ಯುಂಜಯ ರುಮಾಲೆ ಅದನ್ನು ಮಾಡುತ್ತಿದ್ದಾರೆ.

'ಶ್ರೀ ಸಾಮಾನ್ಯರೇ ಅಸಮಾನ್ಯರ' ಎನ್ನುವ ಜೀವನ ಚರಿತ್ರೆ ಮಾಲೆ ಮಾಡುತ್ತಿದ್ದೇವೆ. ಪ್ರತಿ ಜಿಲ್ಲೆಯಲ್ಲಿ ಒಬ್ಬ ರೈತ, ಒಬ್ಬ ಕುಶಲ ಕರ್ಮಿ, ಒಬ್ಬ ಯೋಧನನ್ನು ಪ್ರಾತಿನಿಧಿಕವಾಗಿ ಇಟ್ಟುಕೊಂಡು ಜೀವನ ಚರಿತ್ರೆಯನ್ನು ಕಟ್ಟುವ ಉದ್ದೇಶ ಇದೆ. ಹರ್ಷವರ್ಧನ್ ಶೀಲವಂತ ಈ ಮಾಲಿಕೆಯ ಸಂಪಾದಕರು. 'ಭಾರತೀಯ ಭಾಷಾ ಸಾಹಿತ್ಯದಲ್ಲಿ ಭಾರತ' ಎನ್ನುವ ಸಂಕಲನ ತರುವ ಉದ್ದೇಶ ಇದೆ. ಭಾರತ ಸಂವಿಧಾನದ ಎಂಟನೇ ಅನುಚ್ಛೇದದಲ್ಲಿ 22 ಭಾಷೆಗಳನ್ನು 'ರಾಷ್ಟ್ರೀಯ ಭಾಷೆ' ಎಂದು ನಮೂದಿಸಲಾಗಿದೆ. ಅವುಗಳ ಜೊತೆಗೆ ಇನ್ನೂರಕ್ಕೂ ಹೆಚ್ಚು ಜನಭಾಷೆಗಳು ಇವೆ. ಕನ್ನಡದ ಕವಿಗಳು ಭಾರತದ ಕನಸನ್ನು ಹೇಗೆ ಕಂಡಿದ್ದಾರೆಯೋ ಅಂತೆಯೇ ತೆಲುಗು, ತಮಿಳು, ಮರಾಠಿ, ಕಾಶ್ಮೀರಿ, ಬಂಗಾಳಿ, ಮುಂತಾದ ಭಾಷೆಗಳಲ್ಲಿಯೂ ಕಂಡಿದ್ದಾರೆ. ಅವುಗಳನ್ನು ಕನ್ನಡಕ್ಕೆ ತರುವ ಯೋಚನೆ ಇದೆ. ಆ ಕೆಲಸವನ್ನು ಬಸವರಾಜ ಕಲ್ಗುಡಿ ಮಾಡುತ್ತಾರೆ. 'ಕನ್ನಡ ಕವಿತೆಗಳಲ್ಲಿ ಸ್ತ್ರೀ' ಕೃತಿಯನ್ನು ಎಂ. ಉಷಾ ರೂಪಿಸುತ್ತಿದ್ದಾರೆ. 'ಕನ್ನಡ ಶಾಸನ ಸಾಹಿತ್ಯ ಸಿರಿ' ಪ್ರಕ್ರಿಯೆ ನಡೆಯುತ್ತಿದೆ. ಎಪಿಗ್ರಾಫಿಕ ಕರ್ನಾಟಕದ 24 ಸಂಪುಟಗಳ ಶಾಸನಗಳನ್ನು ಪ್ರಕಟಿಸುವ ಉದ್ದೇಶವಿದೆ. ಅದರ ನೇತೃತ್ವವನ್ನು ದೇವರಕೊಂಡಾ ರೆಡ್ಡಿ ವಹಿಸಿಕೊಂಡಿದ್ದಾರೆ.

◆ **ಸಾಹಿತ್ಯ ವಲಯದದಿಂದ ದೂರ ಇದ್ದು ಕೆಲಸ ಮಾಡುತ್ತಿದ್ದ ನೀವು, ಈಗ ಸಾಹಿತ್ಯ ಅಕಾಡೆಮಿಯ ಕೇಂದ್ರದಲ್ಲಿ ಇದ್ದು ಕೆಲಸ ಮಾಡುವ ಸಂದರ್ಭ ಬಂದಿದೆ. ಈ ಬದಲಾವಣೆ ಹೇಗನ್ನಿಸುತ್ತಿದೆ?**

ಅಧ್ಯಕ್ಷನಾಗಿ ಒಂದು ವರ್ಷ ಎರಡು ತಿಂಗಳು ಕಳೆದಿವೆ. ಈ ಅವಧಿಯಲ್ಲಿ ಕೆಲವರು ವಿನಾಕಾರಣ ಟೀಕೆ ಮಾಡಿದ್ದಾರೆ. ಪೂರ್ವಗ್ರಹದಿಂದ ಅವಮಾನಿಸಿದ್ದಾರೆ. ಅದರಿಂದ ಪಾಠ ಕಲಿತಿದ್ದೇನೆ. ಅಭಿಮಾನದ ಸನ್ಮಾನಗಳನ್ನೂ ಕಂಡಿದ್ದೇನೆ, ಅದರಿಂದ ಎಚ್ಚರಗೊಂಡಿದ್ದೇನೆ. ಅವಮಾನ–ಸನ್ಮಾನಗಳ ಮೂಲಕ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಇರುವ ಶಕ್ತಿ ಅರ್ಥ ಆಯ್ತು. ಇಲ್ಲಿ ವ್ಯಕ್ತಿ ಮುಖ್ಯ ಅಲ್ಲ. ಅಕಾಡೆಮಿ ಎನ್ನುವ ಶಕ್ತಿ ದೊಡ್ಡದು. ಕರ್ನಾಟಕದ ಸಾಹಿತಿಗಳು, ವಿಮರ್ಶಕರು ಅಕಾಡೆಮಿಯ ಬಗ್ಗೆ ಗೌರವ–ಅಭಿಮಾನ ಇಟ್ಟುಕೊಂಡಿದ್ದಾರೆ. ಹಾಗಾಗಿ ಅಕಾಡೆಮಿಯ ಕಮ್ಮಟ–ಯೋಜನೆಗಳಿಗೆ ನಾನು ಯಾರ ಸಹಕಾರ ಬಯಸಿದರೂ ಅವರಿಂದ ಬೆಂಬಲ ದೊರೆತಿದೆ.

◆ **ಬಲಪಂಥೀಯ ಚಿಂತಕ ಎನ್ನುವ ಹಣೆಪಟ್ಟಿ ನಿಮಗೆ ತೊಡಕಾಗಿದೆಯೇ?**

ಸಾಹಿತ್ಯ ವಲಯದಲ್ಲಿ ಬಲಪಂಥೀಯ, ಎಡಪಂಥೀಯ ಎಂಬ ವಿಭಜಿತ ವರ್ಗ ಇರುವುದು ನಿಜ. ನಾನು ಎಡಪಂಥೀಯನೂ ಅಲ್ಲ, ಬಲಪಂಥೀಯನೂ ಅಲ್ಲ. ನಾನು ಪಥಿಕ, ರಾಷ್ಟ್ರಪಥಿಕ. ಪಂಥ ವೃತ್ತಾಕಾರದಲ್ಲಿ ಅಲ್ಲೇ ಸುತ್ತುತ್ತಿರುತ್ತದೆ. ಪಥ ಎಂದರೆ ದಾರಿ. ನಾನು ಆ ಮಾರ್ಗದಲ್ಲಿ ಸಾಗುತ್ತೇನೆ. ನಿಂತಿರುವ ನೀರು ಮತ್ತು ಮನಸ್ಸು ಕೆಡುತ್ತದೆ ಎಂದು ನಂಬಿದ್ದೇನೆ. ನನ್ನನ್ನು ಯಾವ ಪಂಥದಲ್ಲಿ ಗುರುತಿಸುತ್ತಾರೋ ಅದು ಮುಖ್ಯ ಅಲ್ಲ. ಇದು ಕರ್ನಾಟಕ ಸಾಹಿತ್ಯ ಅಕಾಡೆಮಿ. ಅಕಾಡೆಮಿಯ ಅಧ್ಯಕ್ಷನಾಗಿ ಕೆಲಸ ಮಾಡಬೇಕೇ ಹೊರತು ವಸಂತಕುಮಾರ್ ಆಗಿ ಅಲ್ಲ. ವ್ಯಕ್ತಿಯಾಗಿ ನಾನು ಅಕಾಡೆಮಿಯ ಘನತೆ, ಕನ್ನಡದ ಪರಂಪರೆಯನ್ನು ಗೌರವಿಸುವ ಕೆಲಸ ಮಾಡುವೆ. ಸಾಹಿತ್ಯ ವಲಯದಲ್ಲಿ ನನ್ನ ವಿನಂತಿ ಏನೆಂದರೆ, ಎಡಪಂಥ – ಬಲಪಂಥಗಳನ್ನು ಮೀರಿ ರಾಷ್ಟ್ರಪಥಿಕರಾಗುವ ಅನಿವಾರ್ಯತೆ ಇದೆ. ಸ್ವಾತಂತ್ರ್ಯಪೂರ್ವದಿಂದ ಹಿಡಿದು ಇಂದಿನ ತನಕ ಅದನ್ನೇ ನಮ್ಮ ಹಿರಿಯರು ಹೇಳಿದ್ದಾರೆ.

> **ಕರ್ನಾಟಕ ಸಾಹಿತ್ಯ ಅಕಾಡೆಮಿ ಸರ್ಕಾರದ ಅಂಗಸಂಸ್ಥೆ ಆಗಿದ್ದರೂ ಅದರ ಉದ್ದೇಶ ರಾಜಕಾರಣವನ್ನು ಮೀರಿ, ಸಾಹಿತ್ಯ ಮತ್ತು ಸಂಸ್ಕೃತಿಯ ಕೆಲಸ ಮಾಡುವುದಾಗಿದೆ.**

◆ **ಸರ್ಕಾರ ಬದಲಾದಂತೆ ಅಕಾಡೆಮಿಗಳ ಆಡಳಿತ ಮಂಡಳಿ ಬದಲಾಗುತ್ತವೆ. ಇದು ಎಷ್ಟು ಸರಿ?**

ಸರ್ಕಾರ ಬರುತ್ತವೆ, ಹೋಗುತ್ತವೆ. ಸರ್ಕಾರ ಕೇಳುವ ಮುನ್ನ ಯಾವ ಅಧ್ಯಕ್ಷರೂ ರಾಜೀನಾಮೆ ನೀಡಬಾರದು ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ನಾವಾಗಿಯೇ ಹೋಗುತ್ತೇವೆ ಅಂದರೆ ಯಾವುದೋ ಪಕ್ಷ– ಸಿದ್ಧಾಂತಕ್ಕೆ ಅಂಟಿಕೊಂಡಿದ್ದೇವೆ ಎಂದೆನಿಸುತ್ತದೆ. ಈಗಿರುವ ಸರ್ಕಾರ, ಹಿಂದಿನ ಸರ್ಕಾರ, ಅದರ ಹಿಂದಿನ ಸರ್ಕಾರ, ಮುಂದಿನ ಸರ್ಕಾರ ಯಾವುದೇ ಇರಬಹುದು. ಅದು ಪಕ್ಷದ ಸರ್ಕಾರ ಅಲ್ಲ. 'ಕರ್ನಾಟಕ ಸರ್ಕಾರ' ಎಂದು ಗ್ರಹಿಸಬೇಕು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸರ್ಕಾರದ ಅಂಗಸಂಸ್ಥೆ ಆಗಿದ್ದರೂ ಅದರ ಉದ್ದೇಶ ರಾಜಕಾರಣವನ್ನು ಮೀರಿ, ಸಾಹಿತ್ಯ ಮತ್ತು ಸಂಸ್ಕೃತಿಯ ಕೆಲಸ ಮಾಡುವುದಾಗಿದೆ. ಸರ್ಕಾರವೇ ನೇಮಕ ಮಾಡಿದ್ದರಿಂದ ತೆಗೆಯುವ ಅಧಿಕಾರವೂ ಅದಕ್ಕಿದೆ. ಅರವಿಂದ ಮಾಲಗತ್ತಿ ಅವರಿಗೆ, 'ರಾಜೀನಾಮೆ ಕೊಡಬೇಡಿ ಸರ' ಎಂದು ಫೋನ್ ಮಾಡಿ ವಿನಂತಿ ಮಾಡಿದ್ದೆ. ಸರ್ಕಾರ ಕೂಡ ಏಕಾಏಕಿ ತೆಗೆಯಬಾರದು. ಅಧ್ಯಕ್ಷರಾದವರಿಗೂ ಪಕ್ಷಾತೀತ ನಡೆದುಕೊಳ್ಳುವ ಜವಾಬ್ದಾರಿ ಇರುತ್ತದೆ. 'ಪಂಪನಿಲ್ಲಿ ಮುಖ್ಯಮಂತ್ರಿ' ಎನ್ನುವ ಸಾಂಸ್ಕೃತಿಕ ಧೋರಣೆ ಇರಬೇಕು. ಸರ್ಕಾರಿ ಸಂಸ್ಥೆ ಆಗಿರುವುದರಿಂದ ಸಮನ್ವಯ ಸಾಧಿಸಬೇಕಾಗುತ್ತದೆ.

◆ **ಅಕಾಡೆಮಿ ಅಧ್ಯಕ್ಷರಾದ ಸಂದರ್ಭದಲ್ಲಿ ಕೇಳಿ ಬಂದ ಅಪಸ್ವರಕ್ಕೆ ಇಂದಾದರೂ ಪ್ರತಿಕ್ರಿಯೆ ನೀಡಬಹುದಾ?**

ಅದರಿಂದ ಒಳ್ಳೆಯದಾಗಿದೆ. ಟೀಕೆ ಮಾಡಿದವರೇ ನನ್ನನ್ನು ಬೆಳೆಸಿದ್ದಾರೆ. ಅಂತಹ ಅಪಸ್ವರಗಳು ನನ್ನ ಜೀವನದಲ್ಲಿ ನಿರಂತರವಾಗಿರಲಿ ಎಂದು ಬಯಸುತ್ತೇನೆ. ಟೀಕೆಗಳಿಂದ ಹೆಚ್ಚು ಕಲಿಯುತ್ತೇವೆ, ಗಟ್ಟಿಯಾಗುತ್ತೇವೆ. ಆರಂಭದಲ್ಲಿನ ಟೀಕೆಗಳಿಂದ ನನಗೆ ನೋವಾಗಿದ್ದು ನಿಜ. ಆದರೆ, ಅವು ನನಗೆ ಶಕ್ತಿ ಕೊಟ್ಟಿವೆ. ಹಾಗಾಗಿ ಟೀಕಿಸಿದವರಿಗೆ ವಂದನೆ ಹೇಳಲು ಬಯಸುತ್ತೇನೆ.

◆ **ಅಕಾಡೆಮಿಯಂತಹ ಸಾರ್ವಜನಿಕ ಸಂಸ್ಥೆಗಳ ಅಧ್ಯಕ್ಷರ ಕಾರ್ಯ ನಿರ್ವಹಣೆಯ ಮೌಲ್ಯಮಾಪನದ ವ್ಯವಸ್ಥೆ ಇರಬೇಕಲ್ಲವೆ?**

ಸಮಾಜವೇ ಅದನ್ನು ಮಾಡಬೇಕು. ವ್ಯಕ್ತಿಗತವಾಗಿ ಉತ್ತರದಾಯಿತ್ವವನ್ನು ನಾವು ಇಟ್ಟುಕೊಳ್ಳಬೇಕು. ಇಲ್ಲಿ ಬಳಸುವ ಪ್ರತಿ ಪೈಸೆಯೂ ಜನರ ಹಣ. ಅದರ ಒಳಗೆ ಜನರ ಕಣ್ಣೀರಿದೆ, ಬೆವರಿದೆ ಎನ್ನುವುದನ್ನು ಫೀಲ್ ಮಾಡಿದರೆ ಸಾಕು. ಜನರ ದುಡ್ಡು ಜನರಿಗೆ ಬಳಸಬೇಕು. ನಮ್ಮ ಪ್ರತಿ ಕೆಲಸವೂ ಔಷಧ ಆಗಬೇಕು. ಸಂಸ್ಕೃತಿ ಇರುವುದೇ ಅದಕ್ಕಾಗಿ. ಗಾಯ ಮಾಡಲು ಹೋದರೆ ಹುಣ್ಣಾಗುತ್ತದೆ. ಆತ್ಮಸಾಕ್ಷಿಗೆ ಅನುಗುಣವಾಗಿದ್ದರೆ ಉತ್ತರದಾಯಿತ್ವ ಇರುತ್ತದೆ. ಅಭಿಮನ್ಯು ಪಾಂಡವರ ಪಾಳೆಯದವನು. ಅವನು ಸತ್ತಾಗ ಅವನ ಶೌರ್ಯವನ್ನು ದುರ್ಯೋಧನ ಹೊಗಳುತ್ತಾನೆ. ಹೀಗಿರಬೇಕು ವಿಮರ್ಶೆ.

ಅಕಾಡೆಮಿಯ ಜಾಲತಾಣ:
http://karnatakasahithyaacademy.org/

ಪ್ರತಿಕ್ರಿಯಿಸಿ: feedback@sudha.co.in